ಕರ್ನಾಟಕ ವಿಶ್ವವಿದ್ಯಾಲಯದ

ಪಬ್ಲಿಕ್ ಸ್ಕೂಲ್, ಧಾರವಾಡ

---

ಕೆ.ಯು./ಯುಪಿಎಸ್/2025–26/ ದಿನಾಂಕ ;07–04–2025

## ಪ್ರವೇಶ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಯುನಿವರ್ಸಿಟಿ ಪಬ್ಲಿಕ್ ಶಾಲೆಯ 2025–26 ನೇ ಶೈಕ್ಷಣಿಕ ಸಾಲಿಗೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಶಾಲೆ ಮತ್ತು ವರದಾ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಅಹ್ವಾನಿಸಲಾಗಿರುತ್ತದೆ. 8ನೇ ತರಗತಿಯಿಂದ ಕನ್ನಡ ಹಾಗೂ ಆಂಗ್ಲ (ಇಂಗ್ಲೀಷ) ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ ಮತ್ತು 5 ಮತ್ತು 8 ನೇ ತರಗತಿಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಮಾತ್ರ ವಸತಿ ನಿಲಯದ ಪ್ರವೇಶಕ್ಕೆ ಲಿಖಿತ ಪರೀಕ್ಷೆ ಇರುತ್ತದೆ. (ಉಳಿದ ವರ್ಗಗಳಿಗೆ ಲಿಖಿತ ಪರೀಕ್ಷೆ ಇರುವದಿಲ್ಲ)

## ಪ್ರವೇಶದ ವಿವರ

1) .ಪ್ರವೇಶ ಅರ್ಜಿ ಫಾರ್ಮಗಳನ್ನು **ದಿನಾಂಕ: 19.04.2025 ರಿಂದ ವಿತರಿಸಲಾಗುವದು.**

2). ಶಾಲಾ ಪ್ರವೇಶಕ್ಕೆ ಅರ್ಜಿ ಶುಲ್ಕ **ರೂ. 61/–** ಹಾಗೂ ವಸತಿ ನಿಲಯದ ಪ್ರವೇಶಕ್ಕೆ **ರೂ.121/–** ಗಳನ್ನು ಚಲನ ಮುಖಾಂತರ ತುಂಬಿ ಅರ್ಜಿಯನ್ನು ಶಾಲಾ ಕಚೇರಿಯಿಂದ ಪಡೆಯಬಹುದು.

3) ಭರ್ತಿ ಮಾಡಿದ ಅರ್ಜಿ ಫಾರ್ಮನ್ನು **ದಿನಾಂಕ: 30.06.2025 ಮಧ್ಯಾಹ್ನ 4–00 ಘಂಟೆ** ಒಳಗೆ ಶಾಲಾ ಕಚೇರಿಗೆ ಸಲ್ಲಿಸುವದು.

**ಪ್ರವೇಶಕ್ಕೆ ಅರ್ಜಿ ಫಾರ್ಮನೊಂದಿಗೆ ಅವಶ್ಯಕವಾಗಿ ಲಗತ್ತಿಸಬೇಕಾದ ದಾಖಲೆಗಳು:**

1) ಹಿಂದಿನ ತರಗತಿಯ ಅಂಕಪಟ್ಟಿ ( ಮಾರ್ಕ್ಸಕಾರ್ಡ)
2) ಜಾತಿ ಹಾಗೂ ಆದಾಯ ಪ್ರಮಾಣಪತ್ರ
3) ವರ್ಗಾವಣೆ ಪ್ರಮಾಣಪತ್ರ. (T.C) ಮೂಲ ಪ್ರತಿ
4) 3 ಇತ್ತೀಚಿನ ಸ್ಟ್ಯಾಂಪ್ ಸೈಜಿನ ಭಾವಚಿತ್ರ
5) ವಾಸಸ್ಥಳದ ದಾಖಲಾತಿ ಪ್ರತಿ (ವಿದ್ಯಾರ್ಥಿ ಆಧಾರ ಕಾರ್ಡ)
6) ವಿದ್ಯಾರ್ಥಿಗಳ ಅಕೌಂಟನ ಪಾಸ್ ಬುಕ್‌ನ ಝೆರಾಕ್ಸ ಪ್ರತಿ
7) ವಿದ್ಯಾರ್ಥಿ ತಂದೆ ತಾಯಿ ಆಧಾರಕಾರ್ಡ ಝೆರಾಕ್ಸ ಪ್ರತಿ
8) ರೇಶನ್ ಕಾರ್ಡ ಪ್ರತಿ.

**ವಿಶೇಷ ಸೂಚನೆ:**

1) 5ನೇ ಮತ್ತು **8**ನೇ ವರ್ಗಕ್ಕೆ ವಸತಿ ನಿಲಯಕ್ಕೆ ಪ್ರವೇಶ ಬಯಿಸಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸ್ಥಳಾವಕಾಶದ ಲಭ್ಯತೆಯ ಅನುಗುಣವಾಗಿ (ಶೇಕಡಾವಾರು ಆಧಾರದ ಮೇಲೆ ) ಪ್ರವೇಶ ನೀಡಲಾಗುವದು.
2) ಲಿಖಿತ ಪರೀಕ್ಷೆಯನ್ನು ಜರುಗಿಸುವ ದಿನಾಂಕ ಮತ್ತು ಸಮಯವನ್ನು ನಂತರದಲ್ಲಿ ತಿಳಿಸಲಾಗುವುದು.
3) ಪ್ರವೇಶ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಶಾಲೆಯ ಕಚೇರಿಯ ದೂರವಾಣಿ **ಸಂಖ್ಯೆ : 0836–2442373** ಗೆ ಕರೆ ಮಾಡಿ ವಿಚಾರಿಸಬಹುದು. ಮುಂದುವರೆದು ಮೇಲ್ಕಾಣಿಸಿದ ವಿಷಯದಲ್ಲಿ ಯಾವುದೇ ಬದಲಾವಣೆಯನ್ನು ಜಾರಿಗೆ ತರುವ ಹಕ್ಕನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

ಕುಲಸಚಿವರು<br>ಕರ್ನಾಟಕ ವಿಶ್ವವಿದ್ಯಾಲಯ<br>ಧಾರವಾಡ

ಪ್ರಾಚಾರ್ಯರು<br>ಕವಿವಿ ಪಬ್ಲಿಕ್ ಸ್ಕೂಲ್<br>ಧಾರವಾಡ